**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ.ಸಿ.446/2021**

ಪಿರ್ಯಾದುದಾರರು ಃ ಅಬಕಾರಿ ಪೊಲೀಸ್

-ವಿರುದ್ಧ-

ಆರೋಪಿ/ತರು ಃ ಭರತ್ ನಾಯ್ಕ

-ಃದೋಷಾರೋಪಣೆಃ-

ಶ್ರೀ ವೈದ್ಯ ಶ್ರೀಕಾಂತ್, ಬಿ.ಎಸ್‌ಇ, ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ತರೀಕೆರೆ ಆದ ನಾನು ಈ ಕೆಳಗೆ ಕಾಣಿಸಿರುವಃ

ಭರತ್ ನಾಯ್ಕ ಬಿನ್ ಶಂಕರನಾಯ್ಕ, 25 ವರ್ಷ, ವಾಸಃ
ಕೆಂಚಾಪುರ ಗ್ರಾಮ, ತರೀಕೆರೆ ತಾಃ

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಎಂದರೆಃ

ದಿನಾಂಕಃ02.03.2021 ರಂದು ಸಂಜೆ 6-20 ರ ಸಮಯದಲ್ಲಿ ತರೀಕೆರೆ ಠಾಣಾ ಸರಹದ್ದಿನ ಕೆಂಚಾಪುರ ಗ್ರಾಮದಿಂದ ಸಿದ್ದೀಪುರ ಗ್ರಾಮದ ಕಡೆಗೆ ಹೋಗುವ ರಸ್ತೆಯ ಪಕ್ಕದಲ್ಲಿ ಬರುವ ಓವರ್ ಟ್ಯಾಂಕ್ ನ ಹತ್ತಿರ ಆರೋಪಿಯಾದ ನೀವು ಅಕ್ರಮವಾಗಿ ಯಾವುದೇ ಪರವಾನಗಿ ಇಲ್ಲದೇ ಒಂದು ಹಳದಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 90 ಮಿಲಿಯ 40 ರಾಜಾ ವಿಸ್ಕಿಯ ಟೆಟ್ರಾಪ್ಯಾಕ್ ಗಳನ್ನು ಹೊಂದಿ, ಆ ಮೂಲಕ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.**32** ರ ರೀತ್ಯಾ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

2. ಅದೇ ದಿನ, ಅದೇ ಸಮಯ, ಸ್ಥಳ ಹಾಗೂ ವಿಚಾರದಲ್ಲಿ ಆರೋಪಿಯಾದ ನೀವು ಒಂದು ಹಳದಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 90 ಮಿಲಿಯ 40 ರಾಜಾ ವಿಸ್ಕಿಯ ಟೆಟ್ರಾಪ್ಯಾಕ್ ಗಳನ್ನು ಅಕ್ರಮವಾಗಿ ಇಟ್ಟುಕೊಂಡು ಲಾಭಕ್ಕಾಗಿ ಮಾರಾಟ ಮಾಡುತ್ತಿದ್ದ, ಆ ಮೂಲಕ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.**34** ರ ರೀತ್ಯಾ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

3. ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಒಂದು ಹಳದಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 90 ಮಿಲಿಯ 40 ರಾಜಾ ವಿಸ್ಕಿಯ ಟೆಟ್ರಾಪ್ಯಾಕ್‌ಗಳು ಅದು ಮಾನವನ ಆರೋಗ್ಯಕ್ಕೆ ಹಾನಿಕರವೆಂದು ಗೊತ್ತಿದ್ದರೂ ಕೂಡಾ ವಶದಲ್ಲಿಟ್ಟುಕೊಂಡು ಲಾಭಕ್ಕಾಗಿ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದು, ಆ ಮೂಲಕ ನೀವು ಭಾ.ದಂ.ಸಂ. ಕಲಂ.273 ರ ರೀತ್ಯಾ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ

**Sd/-**
**(ವೈದ್ಯ ಶ್ರೀಕಾಂತ್)**
ಹಿ. ಪ್ರಧಾನ ಪ್ರದನ್ಯಾದಂ, ತರೀಕೆರೆ.

ಪ್ರಃ 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?
ಉಃ

ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?
ಉಃ

(ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)
ದಿನಾಂಕಃ

*Sd/-*
ಹಿ. ಪ್ರಧಾನ ಪ್ರ.ದ.ನ್ಯಾದಂ ತರೀಕೆರೆ.

ಆರೋಪಿ/ತರ ಸಹಿಃ